# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ.

***ದಿನಾಂಕ 10/03/2020 ನೇ ಮಂಗಳವಾರ ಬೆಳಗ್ಗೆ 11.30 ಗಂಟೆಗೆ ಸಮಿತಿಯ ಸಭಾಂಗಣದಲ್ಲಿ ಸಮಿತಿಯ ಅಧ್ಯಕ್ಷರಾದ ಶ್ರೀ ಜಯರಾಮ ಇವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಸಾಮಾನ್ಯ ಸಭೆಯ ನಡವಳಿಗಳು.***

| ಕ್ರ.ಸಂ. | ಹಾಜರಿ | ಕ್ರ.ಸಂ. | ಗೈರುಹಾಜರಿ |
|---|---|---|---|
| 1 | ಶ್ರೀ ಜಯರಾಮ, ಅಧ್ಯಕ್ಷರು | | – |
| 2 | ಶ್ರೀ ಟಿ.ಜಿ. ಕುಮಾರ್, ಉಪಾಧ್ಯಕ್ಷರು | | |
| 3 | ಶ್ರೀಮತಿ ಮಂಜುಳ, ಸದಸ್ಯರು | | |
| 4 | ಶ್ರೀ ಜಯಕುಮಾರ ಎಂ.ಸಿ., ಸದಸ್ಯರು | | |
| 5 | ಶ್ರೀ ದೇವರಾಜು ಡಿ.ಜಿ., ಸದಸ್ಯರು | | |
| 6 | ಶ್ರೀ ಧರ್ಮಪ್ಪ ಸಿ.ಎನ್., ಸದಸ್ಯರು | | |
| 7 | ಶ್ರೀಮತಿ ಪಾರ್ವತಮ್ಮ, ಸದಸ್ಯರು | | |
| 8 | ಶ್ರೀ ಶಶಿಧರ ಎನ್.ಈ.,ಸದಸ್ಯರು | | |
| 9 | ಶ್ರೀ ಚಂದ್ರಶೇಖರ್ ಕೆ.ಎಸ್., ಸದಸ್ಯರು | | |
| 10 | ಶ್ರೀ ಶಶಿಕುಮಾರ್ ಹೆಚ್.ಸಿ., ಸದಸ್ಯರು | | |
| 11 | ಶ್ರೀ ಟಿ.ಎಸ್. ರುದ್ರಯ್ಯ, ಸದಸ್ಯರು | | |
| 12 | ಶ್ರೀ ನಾಗರಾಜನಾಯ್ಕ ಎ.ಸಿ., ಸದಸ್ಯರು | | |
| 13 | ಶ್ರೀ ಆರ್. ಚಿಕ್ಕೇಗೌಡ, ಸದಸ್ಯರು | | |

***ವಿಷಯ 1):*** ***ಸಮಿತಿಯ ಹಿಂದಿನ ಸಾಮಾನ್ಯ ಸಭೆ/ ತುರ್ತು ವಿಶೇಷ ಸಭೆ/ ಉಪ ಸಮಿತಿ ಸಭೆಗಳ ನಡವಳಿಗಳನ್ನು ಓದಿ ಒಪ್ಪಿ ದಾಖಲಿಸುವ ವಿಚಾರ.***

ತೀರ್ಮಾನ: ದಿನಾಂಕ 13/01/2020 ರ ಸಮಿತಿ ಸಾಮಾನ್ಯ ಸಭೆ, ದಿನಾಂಕ 18/01/2020 ರ ತುರ್ತು ವಿಶೇಷ ಸಭೆ ಮತ್ತು ದಿನಾಂಕ 29/02/2020 ರಂದು ನಡೆದ ಸಮಿತಿಯ ಆಡಿಟ್ ಉಪ ಸಮಿತಿ ಸಭೆಯ ನಡವಳಿಗಳನ್ನು ಓದಿ ಒಪ್ಪಲಾಯಿತು.

***ವಿಷಯ 2):*** ***ಕೃಉಮಾಸ, ಅರಸೀಕೆರೆ – ಜನವರಿ–2020 ನೇ ಮಾಹೆಯವರೆಗಿನ ಜಮಾ–ಖರ್ಚಿನ ತಃಖ್ತೆಯನ್ನು ದಿನಾಂಕ 29/02/2020 ರಂದು ನಡೆದು ಆಡಿಟ್ ಉಪ ಸಮಿತಿ ಸಭೆಯು ಒಪ್ಪಿರುವುದನ್ನು ಪರಿಶೀಲಿಸಿ ದೃಢೀಕರಿಸುವ ವಿಚಾರ.***

ತೀರ್ಮಾನ: ಸಮಿತಿಯ ಜನವರಿ – 2020 ನೇ ಮಾಹೆಯ ಜಮಾ ಮತ್ತು ಖರ್ಚಿನ ತಃಖ್ತೆಯನ್ನು ದಿನಾಂಕ 29/02/2020 ರಂದು ನಡೆದ ಆಡಿಟ್ ಉಪ ಸಮಿತಿ ಸಭೆಯಲ್ಲಿ ವಿವರವಾಗಿ ಪರಿಶೀಲಿಸಿ ಒಪ್ಪಿರುವುದನ್ನು ದೃಢೀಕರಿಸಲಾಯಿತು.

***ವಿಷಯ 3):*** ***ಕೃಉಮಾಸ, ಅರಸೀಕೆರೆ – 2019–20 ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಎ.ಪಿ.ಎಂ.ಸಿ. ಗಳ ವಿಶೇಷ ಯೋಜನಗೆಗಳಿಗೆ ನೆರವು ಯೋಜನೆಯಲ್ಲಿ ಅನುಮೋದಿತ ಸಮಿತಿ ವ್ಯಾಪ್ತಿಯಲ್ಲಿ ಬರುವ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ ಕೃಮಾಇ/ಕೃಉಮಾಸ/ ಅರಸೀ/1787/2019–20 ದಿನಾಂಕ 23/01/2020 ರನ್ವಯ ಬಂದ ಟೆಂಡರ್‌ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಅರಸೀಕೆರೆ ಇವರು ತಯಾರಿಸಿಕೊಟ್ಟಿರುವ ತಾಂತ್ರಿಕ ಬಿಡ್‌ನ ಎವ್ಯಾಲ್ಯುಷನ್ ರಿಪೋರ್ಟ್ ಮತ್ತು ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಈ ಸಮಿತಿಯ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ ಕೃಉಮಾಸ(ಅರಸೀ)/1787/2019–20 ದಿನಾಂಕ 23/01/2020 ರಲ್ಲಿ ಕೃಉಮಾಸ, ಅರಸೀಕೆರೆ 2019–20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ

ಯೋಜನೆಯಡಿ ಎ.ಪಿ.ಎಂ.ಸಿಗಳ ವಿಶೇಷ ಯೋಜನೆಗಳಿಗೆ ನೆರವು ಯೋಜನೆಯಲ್ಲಿ ಅನುಮೋದಿತ ಸಮಿತಿ ವ್ಯಾಪ್ತಿಯಲ್ಲಿ ಬರುವ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಅಲ್ಪಾವಧಿ ಮರು ಟೆಂಡರ್ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಿದ್ದು ಒಂದು ರಾಜ್ಯಮಟ್ಟದ ಆಂಗ್ಲ ದಿನಪತ್ರಿಕೆ 'Indian Express', ಎರಡು ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆಗಳಾದ 'ಉದಯವಾಣಿ'', 'ಹೊಸದಿಗಂತ' ದಿನಪತ್ರಿಕೆಗಳಲ್ಲಿ ದಿನಾಂಕ 24/01/2020 ರಲ್ಲಿನ ಪ್ರಕಟಣೆಯನುಸಾರ ಇ–ಟೆಂಡರ್ ಮುಖಾಂತರ ಸಲ್ಲಿಸಿದ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ 03/02/2020 ರಂದು ತೆರೆಯಲಾಗಿದ್ದು ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ಇವರು ತಾಂತ್ರಿಕ ಬಿಡ್‌ನ ಎವಾಲ್ಯುಯೇಷನ್ ವರದಿ ಮತ್ತು ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ದಿನಾಂಕ 25/02/2020 ರಂದು ತಯಾರಿಸಿ ದೃಢೀಕರಿಸಿ ಕಳುಹಿಸಿಕೊಟ್ಟಿರುವುದನ್ನು ಸಮಿತಿಯು ಈ ಕೆಳಕಂಡಂತೆ ವಿವರವಾಗಿ ಪರಿಶೀಲಿಸಿತು.

**:ಟೆಂಡರ್‌ನ ತುಲನಾತ್ಮಕ ತಃಖ್ತೆ:**

| ಕ್ರ. ಸಂ. | ಗುತ್ತಿಗೆದಾರರ ಹೆಸರು | 2018–19 ನೇ ಸಾಲಿನ ಅನುಮೋದಿತ ಶೆಡ್ಯೂಲ್ ಬಿ' ಪ್ರಕಾರ ಟೆಂಡರ್‌ಗಿಟ್ಟ ಮೊತ್ತ | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಬರುವ ಮೊತ್ತ | ಗುತ್ತಿಗೆದಾರರ ಮೊತ್ತವನ್ನು ಮತ್ತು ಟೆಂಡರ್‌ಗಿಟ್ಟ ಮೊತ್ತವನ್ನು ಹೋಲಿಸಿದಾಗ ಬರುವ ಶೇಕಡವಾರು ವಿವರ | ಷರಾ |
|---|---|---|---|---|---|
| **1** | **2** | **3** | **4** | **5** | **6** |
| 1 | ಶ್ರೀ ಎಂ. ಕುಮಾರ್ | 53,29,245=38 | 43,65,497=20 | 18.08 ರಷ್ಟು ಕಡಿಮೆ | ಒಂದನೇ ಕಡಿಮೆ ದರ |
| 2 | ಶ್ರೀ ಹೆಚ್.ಎಸ್. ಅರುಣ್‌ಕುಮಾರ್ | 53,29,245=38 | 49,02,659=93 | 8.00 ರಷ್ಟು ಕಡಿಮೆ | ಎರಡನೇ ಕಡಿಮೆ ದರ |
| 3 | ಶ್ರೀ ಉಮೇಶ್ | 53,29,245=38 | 56,96,954=95 | 6.89 ರಷ್ಟು ಹೆಚ್ಚು | ಮೂರನೇ ಕಡಿಮೆ ದರ |
| 4 | ಶ್ರೀ ಜ್ಞಾನೇಶ್ ಎಲ್.ಎಸ್. | 53,29,245=38 | 57,55,585=01 | 8.00 ರಷ್ಟು ಹೆಚ್ಚು | ನಾಲ್ಕನೇ ಕಡಿಮೆ ದರ |
| 5 | ಶ್ರೀ ಎಂ.ಡಿ. ಚಂದ್ರಶೇಖರ್ | 53,29,245=38 | 59,44,854=20 | 11.55 ರಷ್ಟು ಹೆಚ್ಚು | ಐದನೇ ಕಡಿಮೆ ದರ |

ಸದರಿ ಕಾಮಗಾರಿಗೆ ಟೆಂಡರ್ ಸಲ್ಲಿಸಿದ ಗುತ್ತಿಗೆದಾರರುಗಳಲ್ಲಿ 1) ಶ್ರೀ ಎಂ. ಕುಮಾರ್, 2) ಹೆಚ್.ಎಸ್. ಅರುಣ್‌ಕುಮಾರ್, 3) ಶ್ರೀ ಉಮೇಶ್, 4) ಶ್ರೀ ಎಂ.ಎಸ್. ಜ್ಞಾನೇಶ್ 5) ಶ್ರೀ ಎಂ.ಡಿ. ಚಂದ್ರಶೇಖರ್ ಇವರುಗಳ ಪೈಕಿ ಶ್ರೀ ಎಂ. ಕುಮಾರ್, ಹೊಳೆನರಸೀಪುರ, ಹಾಸನ ಜಿಲ್ಲೆ ಇವರು ನಮೂದಿಸಿರುವ ಐಟಂವಾರು ದರಗಳ ಒಟ್ಟು ಮೊತ್ತ ರೂ. 43,65,497=20 2018–19 ನೇ ಸಾಲಿನ ಅನುಮೋದಿತ ಶೆಡ್ಯೂಲ್ ಬಿ' ಗೆ ಹೋಲಿಸಿದಾಗ ಶೇ. 18.08 ರಷ್ಟು ಕಡಿಮೆ ದರವಾಗಿದ್ದು 1ನೇ ಕಡಿಮೆ ದರವಾಗಿಗೆ (L1). ಸಮಿತಿಯು ಈ ದರಕ್ಕೆ ಒಪ್ಪಿಗೆ ನೀಡಬೇಕಾಗುತ್ತದೆಂಬ ವಿಷಯವನ್ನು ಹಾಗೂ ತಾಂತ್ರಿಕ ಅಭಿಯಂತರರ ಅಭಿಪ್ರಾಯದಂತೆ L1 ಇರುವ ಶ್ರೀ ಎಂ. ಕುಮಾರ್, ಹೊಳೆನರಸೀಪುರ, ಹಾಸನ ಜಿಲ್ಲೆ ಇವರು ನಮೂದಿಸಿರುವ ದರ ಶೆಡ್ಯೂಲ್ ಬಿ' ದರಗಳಿಗೆ ಶೇ. 18.08 ರಷ್ಟು ಕಡಿಮೆ ಇರುವುದರಿಂದ ಟೆಂಡರ್ ಮಂಜೂರಾತಿಗಾಗಿ ಶಿಫಾರಸ್ಸು ಮಾಡಿರುವುದನ್ನು ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

ಆದರೆ ಸಭೆಯು ಕೂಲಂಕುಶವಾಗಿ ಈ ಬಗ್ಗೆ ಚರ್ಚಿಸಿ ಕಾಮಗಾರಿ ಗುಣಮಟ್ಟವಾಗಿ ಆಗಬೇಕಾಗಿದ್ದು ಪ್ರಸುತ ಸಾಮಗ್ರಿಗಳ ಧಾರಣೆ ಹೆಚ್ಚಾಗಿದ್ದು ಪ್ರಸ್ತುತ ಶೆಡ್ಯೂಲ್ ದರಗಳಿಗೆ ತೀರಾ ಕಡಿಮೆ ಎಂದರೆ ಶೇ. 18.08 ಕಡಿಮೆ ದರ ನಮೂದಿಸರುವ ಗುತ್ತಿಗೆದಾರರುಗಳಿಂದ ಗುಣಮಟ್ಟದ ಕೆಲಸ ನಿರ್ವಹಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಸಮಿತಿಗೆ ಆರ್ಥಿಕವಾಗಿ ಹೆಚ್ಚುವರಿ ಮೊತ್ತವಾದರೂ ಸಹ ಉತ್ತಮ ಗುಣಮಟ್ಟದ ಕೆಲಸ ನಿರ್ವಹಿಸುವ ಹಿತದೃಷ್ಟಿಯಿಂದ ಕಟ್ಟಡ ನಿರ್ಮಾಣ ಸಾಮಗ್ರಿಗಳ ಬೆಲೆ ಏರಿಕೆಯ ಇತ್ತೀಚಿನ ದಿನಗಳಲ್ಲಿ ಶೆಡ್ಯೂಲ್-ಬಿ ಅಥವಾ ಅದಕ್ಕಿಂತ ಹೆಚ್ಚಿನ ಟೆಂಡರ್ ದರ ಬಿಡ್ ಮಾಡಿರುವ ಸಮಿತಿ ವ್ಯಾಪ್ತಿಯ ಸ್ಥಳೀಯ ಗುತ್ತಿಗೆದಾರರನ್ನು ಪರಿಗಣಿಸಿ ಇದೊಂದು ವಿಶೇಷ ಪ್ರಸಂಗವೆಂದು ಪರಿಗಣಿಸಿ ಸಮಿತಿ ವ್ಯಾಪ್ತಿಯ ಸ್ಥಳೀಯ ಗುತ್ತಿಗೆದಾರರಾದ ಕ್ರ. ಸಂ. (3) ರ ಶ್ರೀ ಉಮೇಶ್, ಕಾಟಿಕೆರೆ, ಅರಸೀಕೆರೆ ತಾಲ್ಲೂಕು (L3) ಇವರು ಶೆಡ್ಯೂಲ್ 'ಬಿ' ನ ಎಸ್.ಆರ್. ದರಗಳಿಗೆ ಶೇ. 6.89% ರಷ್ಟು ಹೆಚ್ಚು ದರ ನಮೂದಿಸಿದ್ದು ಈ ದರವು ತುಸು ಹೆಚ್ಚಿಗೆ ಇರುವುದರಿಂದ ಇದಕ್ಕೆ ಮಾನ್ಯ ನಿರ್ದೇಶಕರ ಹಂತದಲ್ಲಿ ಸಂಧಾನ ಸಭೆ ನಡೆಸಿ ಮಾನ್ಯ ನಿರ್ದೇಶಕರು ನಿಗದಿಪಡಿಸುವ ಸಂಧಾನ ದರವನ್ನು ಒಪ್ಪಿ ಅದರಂತೆ ಟೆಂಡರ್ ಮಂಜೂರು ಮಾಡುವಂತೆ ಸಕ್ಷಮ ಪ್ರಾಧಿಕಾರವನ್ನು ಕೋರಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಸಮಿತಿಯ ಈ ನಿರ್ಣಯವು ಕೆ.ಡಬ್ಲ್ಯೂ.-3 ಟೆಂಡರ್ ನಿಯಮಾವಳಿಗಳಿಗೆ ವಿರುದ್ಧವಾಗಿರುತ್ತದೆ ಎಂದು ಕಾರ್ಯದರ್ಶಿಯವರು ಸಭೆಗೆ ತಮ್ಮ ಅಭಿಪ್ರಾಯ ತಿಳಿಸಿದರು. ಆದಾಗ್ಯೂ ಈ ಎಲ್ಲಾ ಮೇಲ್ಕಂಡ ವಾಸ್ತವಾಂಶಗಳನ್ನು ಮತ್ತು ಸಮಿತಿಯ ನಿರ್ಣಯವನ್ನು ಮಾನ್ಯ ನಿರ್ದೇಶಕರ ಅವಗಾಹನೆಗೆ ತಂದು ಸಮಿತಿಯ ಪರವಾಗಿ ಶ್ರೀ ಉಮೇಶ್, ಗುತ್ತಿಗೆದಾರರು, ಅರಸೀಕೆರೆ (L3) ಇವರೊಂದಿಗೆ ಸಂಧಾನ ಮಾಡಿ ಟೆಂಡರ್ ಅನುಷ್ಠಾನಗೊಳಿಸುವ ಸಂಬಂಧ ಟೆಂಡರ್ ಮಂಜೂರಾತಿಯ ಸಂಪೂರ್ಣ ಜವಾಬ್ದಾರಿಯನ್ನು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರಿಗೆ ವಹಿಸಿಕೊಡತಕ್ಕದೆಂದು ಹಾಗೂ ಈ ಸಂಬಂಧ ಅಗತ್ಯ ಮಂಜೂರಾತಿಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

***ವಿಷಯ 4):*** ***ಕೃಉಮಾಸ, ಅರಸೀಕೆರೆ – ಈ ಸಮಿತಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆ 1799 – 1806 /2019-20 ದಿನಾಂಕ 27/01/2020 ರನ್ವಯ 2019-20 ನೇ ಸಾಲಿನ ನಿಯಮ 71 ರಡಿಯಲ್ಲಿ ಕೈಗೊಳ್ಳಲಾದ 08 ಸಂಖ್ಯೆ ವಿವಿಧ ಕಾಮಗಾರಿಗಳ ಟೆಂಡರ್‌ಗಳಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಅರಸೀಕೆರೆ ಇವರು ತಯಾರಿಸಿಕೊಟ್ಟ ತುಲನಾತ್ಮಕ ತಃಖ್ತೆಯನ್ನು ವಿವರವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ಸಮಿತಿಯ ದಿನಾಂಕ 18/01/2020ರ ತುರ್ತು ವಿಶೇಷ ಸಭೆಯಲ್ಲಿ ಮೌಖಿಕವಾಗಿ ಅಭಿಯಂತರರ ಸಮ್ಮುಖದಲ್ಲಿ ಚರ್ಚಿಸಿದಂತೆ, ಸಮಿತಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆ ಕೃಉಮಾಸ(ಅರಸೀ)/1799-1806/2019-20 ದಿನಾಂಕ 27/01/2020 ರನ್ವಯ ದಿನಾಂಕ 17/02/2020 ರಂದು ಸ್ವೀಕರಿಸಲಾದ ಕೃಉಮಾಸ, ಅರಸೀಕೆರೆ 2019-20 ನೇ ಸಾಲಿನ ನಿಯಮ 71 ರಡಿಯಲ್ಲಿ ಕೈಗೊಳ್ಳಲಾದ ವಿವಿಧ 8 ಸಂಖ್ಯೆ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನ ತುಲನಾತ್ಮಕ ತಃಖ್ತೆಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ಇವರು ತಮ್ಮ ಪತ್ರ ಸಂಖ್ಯೆ ಕೃಮಾಇ/ಸಕಾನಿಅ/ ಮಾಅ.ಯೋ/ಅರಸೀ/470/2019-20 ದಿನಾಂಕ 19/02/2020 ರಲ್ಲಿ ಕಳುಹಿಸಿಕೊಟ್ಟಿರುವುದನ್ನು ಪರಿಶೀಲಿಸಲಾಯಿತು. ವಿವರ ಕೆಳಕಂಡಂತಿದೆ.

*1)* ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಆಡಳಿತ ಕಛೇರಿ ಮತ್ತು ಮೀಟಿಂಗ್ ಹಾಲ್ ಕಟ್ಟಡದ ಹೊರಗೋಡೆಗೆ ಹಾಗೂ ಗ್ರಿಲ್‌ಗಳಿಗೆ ಬಣ್ಣ ಲೇಪಿಸುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 88,583/- | ರೂ. 92,893.00 | 4.86 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 93,202.26 | 5.21 ರಷ್ಟು ಹೆಚ್ಚು | 2ನೇ ಕಡಿಮೆ ದರ |

*2)* ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಆಡಳೀತ ಕಛೇರಿ ಕಟ್ಟಡದಲ್ಲಿ ಮಹಿಳೆಯರಿಗೆ ಶೌಚಾಲಯ ನಿರ್ಮಿಸುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 89,271/- | ರೂ. 93,656.00 | 4.91 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 94,469.31 | 5.82 ರಷ್ಟು ಹೆಚ್ಚು | 2ನೇ ಕಡಿಮೆ ದರ |

*3)* ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಮೀಟಿಂಗ್ ಹಾಲ್ ಕಟ್ಟಡಕ್ಕೆ ಬಣ್ಣ ಲೇಪಿಸುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 88,969/- | ರೂ. 92,923.00 | 4.44 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 94,010.64 | 5.66 ರಷ್ಟು ಹೆಚ್ಚು | 2ನೇ ಕಡಿಮೆ ದರ |

*4)* ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಗಂಡಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಆಡಳಿತ ಕಛೇರಿ ಕಟ್ಟಡಕ್ಕೆ ಬಣ್ಣ ಲೇಪಿಸಿ ಸುಧಾರಣೆ ಮಾಡುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 89,143.00 | ರೂ. 93,276.00 | 4.63 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 94,177.29 | 5.64 ರಷ್ಟು ಹೆಚ್ಚು | 2ನೇ ಕಡಿಮೆ ದರ |

5) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಗಂಡಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ರೈತ ಭವನ ಕಟ್ಟಡಕ್ಕೆ ಬಣ್ಣ ಲೇಪಿಸಿ ಸುಧಾರಣೆ ಮಾಡುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 88,480.00 | ರೂ. 92875.00 | 4.96 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 93,636.51 | 5.82 ರಷ್ಟು ಹೆಚ್ಚು | 2ನೇ ಕಡಿಮೆ ದರ |

6) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಗಂಡಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ರ್ಯಾಪ್ ಕಟ್ಟಡದ ಗೋಡೆ ಹಾಗೂ ನೆಲಹಾಸಿಗೆ ಕಾಂಕ್ರೀಟ್ ಹಾಕಿ ಕಟ್ಟಡವನ್ನು ಸುಧಾರಣೆ ಮಾಡುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 89068.00 | ರೂ. 93,434.00 | 4.90 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 93,957.00 | 5.48 ರಷ್ಟು ಹೆಚ್ಚು | 2ನೇ ಕಡಿಮೆ ದರ |

7) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಗಂಡಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ 3ನೇ ಮುಖ್ಯ ರಸ್ತೆಗೆ ಗ್ರಾವೆಲ್ ಹಾಕಿ ರಸ್ತೆ ನಿರ್ಮಿಸುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 88,920.00 | ರೂ. 93,319.00 | 4.94 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 93,600.00 | 5.26 ರಷ್ಟು ಹೆಚ್ಚು | 2ನೇ ಕಡಿಮೆ ದರ |

8) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ 2ನೇ ಮುಖ್ಯ ರಸ್ತೆಯ ಪಕ್ಕಕ್ಕೆ ಹಾಗೂ ಹಳೆಯ ಹರಾಜುಕಟ್ಟೆಯ ಎಡಕ್ಕೆ ಇರುವ ಜಾಗದಲ್ಲಿ ಬೆಳೆದ ಜಂಗಲ್ ತೆಗೆದು ಮಟ್ಟ ಮಾಡಿ ಗ್ರಾವೆಲ್ ಹಾಕುವ ಕಾಮಗಾರಿ.

| ಗುತ್ತಿಗೆದಾರರ ಹೆಸರು | ಟೆಂಡರ್‌ಗೆ ಇಟ್ಟ ಶೆಡ್ಯೂಲ್ ಬಿ' ಮೊತ್ತ | ಗುತ್ತಿಗೆದಾರರು ನಮೂದಿಸಿದ ಮೊತ್ತ | ಶೆಡ್ಯೂಲ್ ಬಿ'ಗೆ ಹೋಲಿಸಿದಾಗ ಆಗುವ ಶೇಕಡವಾರು ಹೆಚ್ಚು /ಕಡಿಮೆ | ಷರಾ |
|---|---|---|---|---|
| ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ | ರೂ. 89,222.00 | ರೂ. 93,648.00 | 4.96 ರಷ್ಟು ಹೆಚ್ಚು | 1ನೇ ಕಡಿಮೆ ದರ |
| ಶ್ರೀ ಎಸ್. ಉಮೇಶ್, ಗುತ್ತಿಗೆದಾರರು, ಅರಸೀಕೆರೆ | | ರೂ. 93,856.40 | 5.19 ರಷ್ಟು ಹೆಚ್ಚು | 2ನೇ ಕಡಿಮೆ ದರ |

ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿದ ಸಮಿತಿಯು ಮೇಲ್ಕಂಡ 8 ಸಂಖ್ಯೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು 2019-20 ನೇ ಸಾಲಿನಲ್ಲಿ ನಿಯಮ 71 ರಡಿಯಲ್ಲಿ

ಕೈಗೊಳ್ಳಲು ತಲಾ 1.00 ಲಕ್ಷ ಮೊತ್ತಕ್ಕೆ ಸಮಿತಿಯು ಆಡಳಿತಾತ್ಮಕ ಅನುಮೋದನೆ ನೀಡುತ್ತಾ ಮೇಲ್ಕಾಣಿಸಿದಂತೆ ಸ್ವೀಕೃತಗೊಂಡ ಮೇಲ್ಕಂಡ ಟೆಂಡರ್ ದಾಖಲಾತಿಗಳನ್ನು ಪರಿಶೀಲಿಸಿದಾಗ ಕಾಮಗಾರಿಗೆ ಟೆಂಡರ್ ಸಲ್ಲಿಸಿದ ಗುತ್ತಿಗೆದಾರರ ಪೈಕಿ ಶ್ರೀ ಹೆಚ್.ಎನ್. ಜಯಪ್ಪ, ಗುತ್ತಿಗೆದಾರರು, ಅರಸೀಕೆರೆ ಇವರು ಮೇಲ್ಕಂಡ ಕಾಮಗಾರಿಗೆ ನಮೂದಿಸಿದ ಶೆಡ್ಯೂಲ್ ಬಿ' ದರದ ಮೊತ್ತಕ್ಕೆ ಷರಾ ಕಾಲಂನಲ್ಲಿ ತೋರಿಸಿರುವಂತೆ ನಮೂದಿಸಿರುವ ಟೆಂಡರ್ ದರಗಳು 1ನೇ ಕಡಿಮೆ ದರಗಳಾಗಿರುತ್ತವೆ. ಸಮಿತಿಯು ಈ ದರಗಳಿಗೆ ತನ್ನ ಒಪ್ಪಿಗೆಯನ್ನು ಸೂಚಿಸಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ ತುರ್ತಾಗಿ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

*ವಿಷಯ 5):* ***ಕೃಉಮಾಸ, ಅರಸೀಕೆರೆ – 2019–20 ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆ ನಿಯಮ 60(ಸಿ) ರಡಿಯಲ್ಲಿ ಅನುಮೋದಿತ ಸಮಿತಿ ವ್ಯಾಪ್ತಿಯಲ್ಲಿ ಬರುವ 37 ಸಂಖ್ಯೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಯ (ಪ್ಯಾಕೇಜ್ ಟೆಂಡರ–3, ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲು) ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ ಸಂಖ್ಯೆ ಕೃಉಮಾಸ(ಅರಸೀ)/1855/2019–20 ದಿನಾಂಕ 10/02/2020 ರನ್ವಯ ಟೆಂಡರ್‌ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ಇವರು ತಯಾರಿಸಿಕೊಟ್ಟಿರುವ ಟೆಂಡರ್‌ನ ತುಲನಾತ್ಮಕ ತಃಖ್ತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ಈ ಸಮಿತಿಯ ಸಂಕ್ಷಿಪ್ತ ಟಂಡರ್ ಪ್ರಕಟಣೆ ಸಂಖ್ಯೆ: ಕೃಮಾಈ/ಕೃಉಮಾಸ/ಅರಸೀ/1855/2019–20 ದಿನಾಂಕ 10/02/2020 ರಲ್ಲಿ ಕೃಉಮಾಸ, ಅರಸೀಕೆರೆ – 2019–20 ನೇ ಸಾಲಿನಲ್ಲಿ ಅನುಮೋದಿತ 37 ಸಂಖ್ಯೆ ಗ್ರಾಮೀಣ ಸಂಪರ್ಕ ರಸ್ತೆ ನಿರ್ಮಾಣ ಪ್ಯಾಕೇಜ್ ಟೆಂಡರ್ – 3 (ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲು) ಸಂಕ್ಷಿಪ್ತ ಮರು ಟೆಂಡರ್ ಕಾಮಗಾರಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅಹ್ವಾನಿಸಿದ್ದು, ದಿನಾಂಕ 12/02/2020 ರ ರಾಜ್ಯ ಮಟ್ಟದ ದಿನಪತ್ರಿಕೆಗಳಾದ "ಸಂಯುಕ್ತ ಕರ್ನಾಟಕ" "ವಿಶ್ವವಾಣಿ" ಮತ್ತು ಸ್ಥಳೀಯ ದಿನ ಪತ್ರಿಕೆಗಳಾದ "ನಾಡಸಹ್ಯಾದ್ರಿ" ಹಾಗೂ "ಅಮೋಘವಾಣಿ" ಗಳಲ್ಲಿನ ಪ್ರಕಟಣೆಯನುಸಾರ ಇ–ಟೆಂಡರ್ ಮುಖಾಂತರ ಟೆಂಟರ್ ಕರೆಯಲಾಗಿದ್ದು ದಿನಾಂಕ 02/03/2020 ರಂದು ಟೆಂಡರ್ ತರೆಯಲಾಗಿದ್ದು, ಇದಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾ.ಅ.ಯೋ. ಅರಸೀಕೆರೆ ಇವರು ಟೆಂಡರ್‌ನ ತುಲಾನಾತ್ಮಕ ತ:ಖ್ತೆಯನ್ನು ದಿನಾಂಕ 09/03/2020 ರಂದು ತಯಾರಿಸಿ ದೃಡೀಕರಿಸಿ ಕಳುಹಿಸಿಕೊಟ್ಟಿರುವುದನ್ನು ಸಮಿತಿಯು ಈ ಕೆಳಕಂಡಂತೆ ವಿವರವಾಗಿ ಪರೀಶಿಲಿಸಿತು.

## :ಟೆಂಡರ್ ತುಲನಾತ್ಮಕ ತಃಖ್ತೆ:

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ, 2019–20 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ನಿಯಮ 60(ಸಿ) ಯಲ್ಲಿ ಅನುಮೋದಿತ ಸಮಿತಿ ವ್ಯಾಪ್ತಿಯಲ್ಲಿ ಬರುವ 37 ಸಂಖ್ಯೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿ (ಪ್ಯಾಕೇಜ್ ಟೆಂಡರ್–3) ಸಂಕ್ಷಿಪ್ತ ಮರು ಟೆಂಡರ್ ಕಾಮಗಾರಿ (ಸಾಮಾನ್ಯ ಸಿವಿಲ್ ಗುತ್ತಿಗೆದಾರರಿಗೆ ಮೀಸಲು)**

| ಕ್ರ.ಸಂ. | ಗುತ್ತಿಗೆದಾರರ ಹೆಸರು | 2018–19 ನೇ ಸಾಲಿನ ಅನುಮೋದಿತ ಶೆಡ್ಯೂಲ್ ಬಿ ಪ್ರಕಾರ ಟೆಂಡರ್‌ಗಿಟ್ಟ ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಬರುವ ಮೊತ್ತ | ಗುತ್ತಿಗೆದಾರರ ಮೊತ್ತವನ್ನು ಮತ್ತು ಟೆಂಡರ್‌ಗಿಟ್ಟ ಮೊತ್ತವನ್ನು ಹೋಲಿಸಿದಾಗ ಬರುವ ಶೇಕಡವಾರು ವಿವರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಶ್ರೀ ಜಿ.ಜಿ. ರಾಜಪ್ಪ | 32,89,485=00 | 28,76,010=00 | 12.56 ರಷ್ಟು ಕಡಿಮೆ | ಒಂದನೇ ಕಡಿಮೆ ದರ |

| | | | | | |
|---|---|---|---|---|---|
| 2 | ಶ್ರೀ ಉಮೇಶ್ | 32,89,485=00 | 32,89,485=00 | ಎಸ್.ಆರ್. ದರ | ಎರಡನೇ ಕಡಿಮೆ ದರ |
| 3 | ಶ್ರೀ ವಿಶ್ವನಾಥ್ ಕೆ.ಜೆ. | 32,89,485=00 | 35,95,290=00 | 9.29 ರಷ್ಟು ಹೆಚ್ಚು | ಮೂರನೇ ಕಡಿಮೆ ದರ |
| 4 | ಶ್ರೀ ಅನಂತಮೂರ್ತಿ ನಾಯ್ಕ | 32,89,485=00 | 30,23,146=05 | 8.09 ರಷ್ಟು ಕಡಿಮೆ | ಅರ್ಹತಾ ಷರತ್ತುಗಳನ್ನು ಪೂರೈಸಿರುವುದಿಲ್ಲ |
| 5 | ಶ್ರೀ ಯತೀಶ್ ಬಿ. | 32,89,485=00 | 32,89,485=00 | ಎಸ್.ಆರ್. ದರ | ಅರ್ಹತಾ ಷರತ್ತುಗಳನ್ನು ಪೂರೈಸಿರುವುದಿಲ್ಲ |
| 6 | ಶ್ರೀ ನವೀನ್ ಕುಮಾರ್ | 32,89,485=00 | 33,16,829=85 | 0.83 ರಷ್ಟು ಹೆಚ್ಚು | ಅರ್ಹತಾ ಷರತ್ತುಗಳನ್ನು ಪೂರೈಸಿರುವುದಿಲ್ಲ |

ಸದರಿ ಕಾಮಗಾರಿಗೆ ಟೆಂಡರ್ ಸಲ್ಲಿಸಿದ್ದ 6 ಜನ ಗುತ್ತಿಗೆದಾರರ ಪೈಕಿ 1) ಶ್ರೀ ಜಿ.ಜಿ. ರಾಜಪ್ಪ, 2) ಶ್ರೀ ಉಮೇಶ್, 3) ಶ್ರೀ ವಿಶ್ವನಾಥ್ ಕೆ.ಜೆ., 4) ಶ್ರೀ ಅನಂತಮೂರ್ತಿ ನಾಯ್ಕ 5) ಶ್ರೀ ಯತೀಶ್ ಬಿ. ಮತ್ತು 6) ಶ್ರೀ ನವೀನ್ ಕುಮಾರ್ ಇವರುಗಳ ಪೈಕಿ ಶ್ರೀ ಜಿ.ಜಿ. ರಾಜಪ್ಪ, ಶ್ರೀ ಉಮೇಶ್ ಮತ್ತು ಶ್ರೀ ಕೆ.ಜೆ. ವಿಶ್ವನಾಥ್ ಇವರು ಅರ್ಹತಾ ಷರತ್ತುಗಳನ್ನು ಪೂರೈಸಿರುತ್ತಾರೆ. ಸದರಿ ಅರ್ಹತಾ ಷರತ್ತುಗಳನ್ನು ಪೂರೈಸಿರುವ ಶ್ರೀ ಜಿ.ಜಿ. ರಾಜಪ್ಪ ಇವರು ನಮೂದಿಸಿರುವ ಐಟಂವಾರು ದರಗಳ ಒಟ್ಟು ಒಟ್ಟು ಮೊತ್ತ **ರೂ. 28,76,010=00** ಶೆಡ್ಯೂಲ್ 'ಬಿ' ಗೆ ಹೋಲಿಸಿದಾಗ **ಶೇ. 12.56 ರಷ್ಟು ಕಡಿಮೆ ದರವಾಗಿದೆ ($L_1$)**. ಸಮಿತಿಯು ಈ ದರಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು. ಟೆಂಡರ್ ದಾಖಲಾತಿಗಳನ್ನು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರಿಗೆ ತಾಂತ್ರಿಕ ವರ್ಗದವರ ಮೂಲಕ ಸಲ್ಲಿಸಿ ಮಂಜೂರಾತಿ ಪಡೆದು ಕಾರ್ಯಗತಗೊಳಿಸತಕ್ಕದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 6): ಕೃಉಮಾಸ, ಅರಸೀಕೆರೆ – ವಿಶೇಷ ಲೆಕ್ಕಪರಿಶೋಧಕರು, ಮೈಸೂರು ವಿಭಾಗ, ಮೈಸೂರು ಇವರು ಸಮಿತಿಯ ಲೆಕ್ಕಪರಿಶೋಧನೆ ಮಾಡಿ ಬಿಡುಗಡೆ ಮಾಡಿರುವ ಸಮಿತಿಯ 2016-17 ಮತ್ತು 2017-18 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ ಈ ಬಗ್ಗೆ ಕ್ರಮ ಕೈಗೊಂಡು ಅನುಪಾಲನಾ ವರದಿ ಸಲ್ಲಿಸಲು ಮತ್ತು 2016-17 & 2017-18 ನೇ ಸಾಲಿನಲ್ಲಿ ಬಜೆಟ್ ಇಲ್ಲದೇ ಖರ್ಚು ಮಾಡಿರುವ ಹಾಗೂ ಮಂಜೂರಾದ ಬಜೆಟ್‌ಗಿಂತ ಹೆಚ್ಚಿಗೆ ಖರ್ಚಾದ ಬಾಬ್ತುಗಳಿಗೆ ಮರು ಹೊಂದಾಣಿಕೆ ಮಾಡಿಕೊಂಡು ಪೂರಕ ಮುಂಗಡ ಪತ್ರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ವಿವರವಾಗಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ಮಾನ್ಯ ವಿಶೇಷ ಲೆಕ್ಕ ಪರಿಶೋಧಕರು, ಕೃಷಿ ಮಾರಾಟ ಇಲಾಖೆ, ಮೈಸೂರು ಇವರ ಪತ್ರ ಸಂಖ್ಯೆ ಕೃಮಾಇ/ವಿಲೆಪ/ಮೈ/51/2019-20 ದಿನಾಂಕ 27/06/2019 ಮತ್ತು ಪತ್ರ ಸಂಖ್ಯೆ ಕೃಮಾಇ/ವಿ.ಲೆ.ಪ/ಮೈ/55/2019-20 ದಿನಾಂಕ 27/06/2019 ರಲ್ಲಿ ಸಮಿತಿಯ 2016-17 ಮತ್ತು 2017-18 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಬಿಡುಗಡೆ ಮಾಡಿರುವುದನ್ನು ಸಮಿತಿಯು ವಿವರವಾಗಿ ಪರಿಶೀಲಿಸಿ ಸದರಿ ಅವಧಿಯಲ್ಲಿ ಸೂಚಿಸಿರುವ ಆಕ್ಷೇಪಿತ ಕಂಡಿಕೆಗಳಿಗೆ ತಿದ್ದುಪಡಿ ವರದಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಕಾರ್ಯದರ್ಶಿಯವರಿಗೆ ಅಧಿಕಾರ ನೀಡಬಹುದೆಂದು ಒಪ್ಪಿ ತೀರ್ಮಾನಿಸಲಾಯಿತು. ಮುಂದುವರೆದು 2016-17 ಮತ್ತು 2017-18 ನೇ ಸಾಲಿನ ಆಕ್ಷೇಪಣೆಗಳಲ್ಲಿ ಕಂಡಿಕೆ ಸಂಖ್ಯೆ 5, 6, 7 ರಲ್ಲಿ ಆಕ್ಷೇಪಣೆಯಾಗಿರುವ ಬಾಬ್ತುಗಳಿಗೆ ಈ ಕೆಳಕಂಡಂತೆ ಕ್ರಮವಹಿಸಲು ಸಮಿತಿಯು ಅವಲೋಕಿಸಿತು.

| ಕಂಡಿಕೆ ಸಂ. | ವಿವರ | 2016-17 | 2017-18 |
|---|---|---|---|
| 5 | ಸಾಮಾನ್ಯ ನಿಧಿ ಮುಂಗಡಪತ್ರದಲ್ಲಿ ಬಜೆಟ್ ಮಂಜೂರಾತಿ ಪಡೆಯದೆ ಖರ್ಚು ಮಾಡಿರುವುದು | ರೂ. 3,00,000/- | ರೂ. 74,370/- |
| 6 | 2014-15 ನೇ ಸಾಲಿನಲ್ಲಿ ವಿವಿಧ ಶೀರ್ಷಿಕೆಯಲ್ಲಿ ಮಂಜೂರಾದ ಬಜೆಟ್‌ಗಿಂತ ಹೆಚ್ಚಿಗೆ ಖರ್ಚು ಮಾಡಿರುವ ಒಟ್ಟು ಮೊತ್ತ. | ರೂ. 29,64,970/- | ರೂ. 1,55,07,506/- |
| 7 | ಖಾಯಂ ನಿಧಿ ಮುಂಗಡ ಪತ್ರದಲ್ಲಿ ಬಜೆಟ್ ಮಂಜೂರಾತಿ ಪಡೆಯದೆ ಖರ್ಚು ಮಾಡಿರುವ ಬಗ್ಗೆ. | ರೂ. 53,05,685/- | ರೂ. 14,31,223/- |

2016-17 ನೇ ಸಾಲಿಗೆ ಸಾಮಾನ್ಯ ನಿಧಿ ಮುಂಗಡ ಪತ್ರದಲ್ಲಿ ಬಜೆಟ್ ಮಂಜೂರಾತಿ ಪಡೆಯದೆ ಖರ್ಚು ಮಾಡಿರುವ ಮೊತ್ತ ರೂ. 3,00,000/- ಗಳಿಗೆ ಮತ್ತು 2017-18 ನೇ ಸಾಲಿನಲ್ಲಿ ರೂ. 74,370/- ಪೂರಕ ಮುಂಗಡ ಪತ್ರದಲ್ಲಿ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

2016-17 ನೇ ಸಾಲಿನಲ್ಲಿ ವಿವಿಧ ಶೀರ್ಷಿಕೆಯಲ್ಲಿ ಮಂಜೂರಾದ ಬಜೆಟ್‌ಗಿಂತ ಹೆಚ್ಚಿಗೆ ಖರ್ಚು ಮಾಡಿರುವ ಮೊತ್ತ ರೂ. 29,64,970/- ಮತ್ತು 2017-18 ನೇ ಸಾಲಿನಲ್ಲಿ ರೂ. 1,55,07,506/- ಗಳಿಗೆ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಕೃಮಾಇ/159/ಮುಂಪ/2007 ದಿನಾಂಕ 26/11/2007 ರಂತೆ ಖರ್ಚಾಗದೆ ಉಳಿದಿರುವ ಶೀರ್ಷಿಕೆಯಡಿ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

2016-17 ನೇ ಸಾಲಿಗೆ ಖಾಯಂ ನಿಧಿ ಮುಂಗಡ ಪತ್ರದಲ್ಲಿ ಬಜೆಟ್ ಮಂಜೂರಾತಿ ಪಡೆಯದೆ ಖರ್ಚು ಮಾಡಿರುವ ಮೊತ್ತ ರೂ. 53,05,685/- ಮತ್ತು 2017-18 ನೇ ಸಾಲಿನಲ್ಲಿ ರೂ. 14,31,223/- ಗಳಿಗೆ ಪೂರಕ ಮುಂಗಡ ಪತ್ರದಲ್ಲಿ ಮಂಜೂರಾತಿ ಕೋರಬಹುದಾಗಿದೆ.

ವಿವರ ಕೆಳಕಂಡಂತಿದೆ.

## 2016-17 ನೇ ಸಾಲು

| ಬಜೆಟ್‌ಗಿಂತ ಹೆಚ್ಚುವರಿ ಖರ್ಚಾಗಿರುವ ವಿವರ | | | | | ಹೊಂದಾಣಿಕೆ ಮಾಡಿಕೊಳ್ಳಬಹುದಾದ ಬಾಬ್ತುಗಳ ವಿವರ | | | |
|---|---|---|---|---|---|---|---|---|
| ಕ್ರ.ಸಂ. | ಶೀರ್ಷಿಕೆ | ಮಂಜೂರಾದ ಮೊತ್ತ | ನಿವ್ವಳ ಖರ್ಚಾದ ಮೊತ್ತ | ಹೆಚ್ಚುವರಿ ಖರ್ಚಾದ ಮೊತ್ತ | ಶೀರ್ಷಿಕೆ | ಮಂಜೂರಾದ ಮೊತ್ತ | ಖರ್ಚಾದ ಮೊತ್ತ | ಉಳಿತಾಯವಾದ ಮೊತ್ತ |
| 1 | ಜಾಹೀರಾತು | 80,000 | 3,01,985 | 2,21,985 | ಸದಸ್ಯರ ಪ್ರವಾಸ ಭತ್ಯೆ ಮತ್ತು ಸಿಟ್ಟಿಂಗ್ ಫೀ | 2,00,000 | 86,156 | 1,13,844 |
| 2 | ದೂರವಾಣಿ | 1,33,828 | 1,49,281 | 15,453 | ಲೆಕ್ಕಪರಿಶೋಧನಾ ಶುಲ್ಕ | 2,00,000 | - | 2,00,000 |
| 3 | ಕಟ್ಟಡಗಳ ನಿರ್ವಹಣೆ | 75,000 | 1,90,498 | 1,15,498 | ನಗರಸಭೆ ಅರಸೀಕೆರೆ ಕಂದಾಯ | 2,00,000 | - | 2,00,000 |
| 4 | ವಿದ್ಯುತ್ ಖರ್ಚು | 5,00,000 | 7,08,848 | 2,08,848 | ಕಛೇರಿ ಗಣಕೀರಣ | 5,00,000 | - | 5,00,000 |
| 5 | ಕೈತೋಟ ಉಸ್ತುವಾರಿ | 50,000 | 89,698 | 39,698 | ಬೋರ್‌ವೆಲ್/ನೀರು ಸರಬರಾಜು/ ದುರಸ್ತಿ | 3,00,000 | 1,61,713 | 1,38,287 |
| 6 | ಸ್ವಚ್ಚತಾ/ ಭದ್ರತಾ ನಿರ್ವಹಣೆ | 13,38,283 | 33,11,143 | 19,72,860 | ಚಾರ್ಟರ್ಡ್ ಅಕೌಂಎಂಟ್ ಶುಲ್ಕ | 40,000 | 9,250 | 30,750 |
| 7 | ಉಗ್ರಾಣ ನಿಗಮದ ಸಂಗ್ರಹಣೆ | 50,000 | 55,575 | 5,575 | ವಾರ್ಷಿಕ ಆಪಧನ | 10,70,627 | - | 10,70,627 |
| 8 | ರೆಮ್ಸ್ ಶುಲ್ಕ | 3,00,000 | 6,84,353 | 3,84,353 | ಗಣ್ಯ ವ್ಯಕ್ತಿ ಸಂದರ್ಶನ | 15,000 | 3,000 | 12,000 |
| | | | | | ಮುದ್ರಣ ಲೇಖನ ಸಾಮಗ್ರಿ | 1,75,000 | 1,69,039 | 5,961 |
| **ಒಟ್ಟು** | | **25,27,111** | **54,91,381** | **29,64,270** | **ಒಟ್ಟು** | **27,00,627** | **4,29,158** | **22,71,469** |

## 2017-18 ನೇ ಸಾಲು

| ಬಜೆಟ್‌ಗಿಂತ ಹೆಚ್ಚುವರಿ ಖರ್ಚಾಗಿರುವ ವಿವರ | | | | | ಹೊಂದಾಣಿಕೆ ಮಾಡಿಕೊಳ್ಳಬಹುದಾದ ಬಾಬ್ತುಗಳ ವಿವರ | | | |
|---|---|---|---|---|---|---|---|---|
| ಕ್ರ.ಸಂ. | ಶೀರ್ಷಿಕೆ | ಮಂಜೂರಾದ ಮೊತ್ತ | ನಿವ್ವಳ ಖರ್ಚಾದ ಮೊತ್ತ | ಹೆಚ್ಚುವರಿ ಖರ್ಚಾದ ಮೊತ್ತ | ಶೀರ್ಷಿಕೆ | ಮಂಜೂರಾದ ಮೊತ್ತ | ಖರ್ಚಾದ ಮೊತ್ತ | ಉಳಿತಾಯವಾದ ಮೊತ್ತ |
| 1 | ಪ್ರಚಾರ | 25,000 | 42,170 | 17,170 | ಅಂಚೆ ತಂತಿ | 30,000 | 11,364 | 18,636 |
| 2 | ಮುದ್ರಣ & ಲೇಖನ ಸಾಮಗ್ರಿ | 2,00,000 | 2,64,348 | 64,348 | ವಾರ್ಷಿಕ ಆಪಃಧನ | 10,73,293 | – | 10,73,293 |
| 3 | ಸಾದಿಲ್ವಾರು | 1,00,000 | 1,14,110 | 14,110 | ಸದಸ್ಯರ ಪ್ರವಾಸ ಭತ್ಯೆ ಸಿಟ್ಟಿಂಗ್ ಫೀ | 2,00,000 | 46,790 | 1,53,210 |
| 4 | ಜಾಹೀರಾತು | 3,00,000 | 3,06,082 | 6,082 | ಬಾಡಿಗೆ/ದರ/ತೆರಿಗೆ | 1,50,000 | 23,419 | 1,26,581 |
| 5 | ಕಟ್ಟಡಗಳ ನಿರ್ವಹಣೆ | 1,50,000 | 1,74,450 | 24,450 | ವಾಹನ ಇಂಧನ ದುರಸ್ತಿ | 8,04,970 | 4,67,033 | 3,37,937 |
| 6 | ವಿದ್ಯುತ್ ಖರ್ಚು | 6,00,000 | 6,20,337 | 20,337 | ಲೆಕ್ಕಪರಿಶೋಧನಾ ಶುಲ್ಕ | 2,00,000 | 1,00,545 | 99,455 |
| 7 | ಸ್ವಚ್ಛತಾ/ ಭದ್ರತಾ ನಿರ್ವಹಣೆ | 13,41,617 | 35,68,811 | 22,27,194 | ರೈತಭವನ ನಿರ್ವಹಣೆ | 75,000 | 2,660 | 72,340 |
| 8 | ವಿದ್ಯುತ್ ಸರಬರಾಜು ನಿರ್ವಹಣೆ/ ಉಸ್ತುವಾರಿ | 2,00,000 | 3,37,379 | 1,37,379 | ನಗರಸಭೆ ಕಂದಾಯ | 2,00,000 | – | 2,00,000 |
| | | | | | ಅಧ್ಯಕ್ಷರ/ ಉಪಾಧ್ಯಕ್ಷರ ಗೌರವಧನ | 54,000 | 24,750 | 29,250 |
| **ಒಟ್ಟು** | | **29,16,617** | **54,27,687** | **25,11,070** | **ಒಟ್ಟು** | **27,87,263** | **6,76,561** | **21,10,702** |

ಮಾನ್ಯ ನಿರ್ದೇಶಕರ ಸುತ್ತೋಲೆಯನಸಾರ ಖರ್ಚಾಗದೆ ಉಳಿದಿರುವ ವಿವಿಧ ಶೀರ್ಷಿಕೆಯಡಿ ಬಜೆಟ್ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಮೊತ್ತಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಬಜೆಟ್ ಮಂಜೂರಾತಿ ಪಡೆಯದೆ ಖರ್ಚು ಮಾಡಿರುವ ಮೊತ್ತ ಹಾಗೂ ಖಾಯಂ ನಿಧಿ ಮುಂಗಡ ಪತ್ರದಲ್ಲಿ ಮಂಜೂರಾತಿ ಪಡೆಯದೆ ಖರ್ಚು ಮಾಡಿರುವ ಮೊತ್ತಕ್ಕೆ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

*ವಿಷಯ 7):* ***ಕೃಉಮಾಸ, ಅರಸೀಕೆರೆ – ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನ ಸಂಖ್ಯೆ 120(ಎ) ನ್ನು ಷಾ ಗಣೇಶ್‌ಮಲ್ ಧೂಳಾಜಿ ಮತ್ತು ಮಕ್ಕಳು, ದಲ್ಲಾಲರು ಮಾಲೀಕರಾದ ಶ್ರೀ ಕೇಸರಿಮಲ್ ಇವರಿಗೆ 1966 ನೇ ವರ್ಷದಲ್ಲಿ ಸಮಿತಿ ವತಿಯಿಂದ ಹಂಚಿಕೆಯಾಗಿದ್ದು ನಿವೇಶನದಲ್ಲಿ ನಿರ್ಮಿಸಿರುವ ಗೋದಾಮನ್ನು ಶ್ರೀ ಕೇಶರಿಮಲ್ ಇವರು ನಿಧನ ಹೊಂದಿದ ಪ್ರಯುಕ್ತ ಅದೇ ನಾಮೆಯಲ್ಲಿ ದಲ್ಲಾಲರ ಲೈಸೆನ್ಸ್ ಪಡೆದು ವ್ಯವಹರಿಸುತ್ತಿರುವ ಅವರ ಮಗ ಇಂದರ್‌ಚಂದ್ ಬಿನ್ ಕೇಸರಿಮಲ್ ಹೆಸರಿಗೆ ವರ್ಗಾವಣೆ ಮಾಡಿಕೊಂಡು ಶ್ರೀ ಕೆ.ಆರ್. ಗೋವಿಂದರಾಜಶೆಟ್ಟಿ & ಸನ್ಸ್, ಮಾಲೀಕರು ಶ್ರೀ ಕೆ.ಜಿ. ರಾಜೇಶ್ ಇವರಿಗೆ ಮಾರಾಟ ಮಾಡುವ ಬಗ್ಗೆ ಕೋರಿ ಬಂದ ಮನವಿ ದಿನಾಂಕ 29/01/2019 ನ್ನು ವಿವರವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನ ಸಂಖ್ಯೆ 120(ಎ) (ವಿಸ್ತೀರ್ಣ 35 x 100 ಅಡಿಗಳು) ನ್ನು ಸಮಿತಿವತಿಯಿಂದ ಕೃಷಿ ಉತ್ಪನ್ನಗಳ ನಿಯಂತ್ರಿತ ವ್ಯಾಪಾರ ವಹಿವಾಟಿನಲ್ಲಿ ತೊಡಗಿದ್ದ ಪರವಾನಿಗೆದಾರರಾದ ಷಾ ಕೇಸರಿಮಲ್ ಧೂಳಾಜಿ & ಮಕ್ಕಳು ಇವರಿಗೆ ಸಮಿತಿ ಸಾಮಾನ್ಯ ಸಭೆ ದಿನಾಂಕ: 14/09/1961 ರ ನಡವಳಿ ಸಂಖ್ಯೆ (6) ರ ತೀರ್ಮಾನದನ್ವಯ ಕೃಷಿ ಮಾರಾಟ ಚಟುವಟಿಕೆಗಳನ್ನು ಉತ್ತೇಜಿಸಲು ಗೋದಾಮು ನಿರ್ಮಾಣ ಉದ್ದೇಶಕ್ಕಾಗಿ ನಿವೇಶನ

ಹಂಚಿಕೆ ಮಾಡಿ ದಿನಾಂಕ: 16/04/1963 ರಂದು ಕ್ರಯ ಪತ್ರ ನೊಂದಣಿ ಮಾಡಿಕೊಡಲಾಗಿರುತ್ತದೆ (ಇದಕ್ಕೆ ಸಂಬಂದಿಸಿದಂತೆ ಸಮಿತಿಯ ಸೈಟ್ ಅಲಾಟ್ಮೆಂಟ್ ರಿಜಿಸ್ಟರ್ ಪುಟ ಸಂಖ್ಯೆ 74–75 ರಲ್ಲಿ ದಾಖಲಾಗಿರುತ್ತದೆ). ಸದರಿ ನಿವೇಶನ ಸಂಖ್ಯೆ 120(ಎ) ರಲ್ಲಿ ನಿರ್ಮಿತ ಗೋದಾಮನ್ನು ಶ್ರೀ ಇಂದರ್‌ಚಂದ್ ಬಿನ್ ಷಾ ಕೇಸರಿಮಲ್ ಇವರು ಷಾ ಕೇಸರಿಮಲ್ ರವರ 2ನೇ ಮಗನಾಗಿದ್ದು ಕೌಟುಂಬಿಕ ವಿಭಾಗ ದನ್ವಯ ಹಕ್ಕುಳ್ಳವರಾದ, ಅಧಿಕೃತ ವಾರಸುದಾರರಾಗಿದ್ದು ದಸ್ತಾವೇಜು ಪತ್ರ ಸಂಖ್ಯೆ. 1704/2006–07 ದಿನಾಂಕ: 04/12/2006 ರ ಪ್ರಕಾರ ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ನಿವೇಶನ ಸಂಖ್ಯೆ 120(ಎ) & ಅದರಲ್ಲಿ ನಿರ್ಮಿಸಿರುವ ಗೋದಾಮನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ ಹಾಗೂ ವ್ಯಾಪಾರ ವಹಿವಾಟನ್ನು ಮುಂದುವರಿಸಿಕೊಂಡು ಬಂದಿರುತ್ತಾರೆ. ಈ ಮಧ್ಯೆ ಶ್ರೀ ಇಂದರ್‌ಚಂದ್ ರವರ ತಂದೆ ಶ್ರೀ ಕೇಸರಿಮಲ್ ಬಿನ್ ಗಣೇಶ್‌ಮಲ್ ರವರು ದಿನಾಂಕ 23/06/2010 ರಂದು ಮರಣ ಹೊಂದಿರುತ್ತಾರೆ. ಶ್ರೀ ಇಂದರ್‌ಚಂದ್ ಬಿನ್ ದಿವಂಗತ ಕೇಸರಿಮಲ್ ರವರು ಅವರ ತಂದೆಯವರ ಮರಣಾನಂತರ ಅವರ ವ್ಯಾಪಾರ ವಹಿವಾಟಿನಲ್ಲಿ ನಷ್ಟ ಉಂಟಾದ ಕಾರಣ ಮತ್ತು ವ್ಯಾಪಾರ ವಹಿವಾಟಿನಲ್ಲಿ ಅಸಮರ್ಥರಾದ ಕಾರಣ ಅವರ ವಶಕ್ಕೆ "ಕೌಟುಂಬಿಕ ಹಿಸ್ಸೆ" ಮುಖಾಂತರ ಬಂದಿರುವ ಅರಸೀಕೆರೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ 120(ಎ) ಮತ್ತು ಅದರಲ್ಲಿನ ಗೋದಾಮನ್ನು ಶ್ರೀ ಕೆ.ಆರ್. ಗೋವಿಂದರಾಜಶೆಟ್ಟಿ ಅಂಡ್ ಸನ್ಸ್ ಮಾಲೀಕರು ಶ್ರೀ ಕೆ.ಜಿ. ರಾಜೇಶ್ ಇವರಿಗೆ ಮಾರಾಟ ಮಾಡುವ ಉದ್ದೇಶವಿದ್ದು ಉಭಯತ್ರರೂ ಅವಶ್ಯ ದಾಖಲಾತಿಗಳೊಂದಿಗೆ ದಿನಾಂಕ 29/01/2019 ರಂದು ಸಮಿತಿಗೆ ಕೋರಿರುವುದನ್ನು ಸಭೆಯು ವಿವರವಾಗಿ ಪರಿಶೀಲಿಸಿ ಸಮಿತಿಯು ಇದಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು. ಕೇಂದ್ರ ಕಛೇರಿ ಸುತ್ತೋಲೆ ಸಂಖ್ಯೆ ಕೃಮಾಇ/ಅಭಿಕೆ/ಮಾರಾಟ/90/2014 ದಿನಾಂಕ 21/08/2015 ರನ್ವಯ ಪ್ರಾಂಗಣದಲ್ಲಿನ ನಿವೇಶನ/ ಗೋದಾಮುಗಳನ್ನು ಸಕ್ರಮಗೊಳಿಸುವ ಹಿನ್ನಲೆಯಲ್ಲಿ ಅರಸೀಕೆರೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ 120(ಎ) ಮತ್ತು ಅದರಲ್ಲಿನ ಕಟ್ಟಡವನ್ನು ಶ್ರೀ ಇಂದರ್‌ಚಂದ್ ಇವರ ಹೆಸರಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿ & ಅ) ಅಧಿನಿಯಮ 1966 ರ ಕಲಂ 9(2) ರಡಿಯಲ್ಲಿ ಖಾತೆ ವರ್ಗಾವಣೆ ಮಾಡುವ ಸಂಬಂಧ ಮತ್ತು ಶ್ರೀ ಇಂದರ್‌ಚಂದ್ ಬಿನ್ ದಿವಂಗತ ಕೇಸರಿಮಲ್ ಇವರು ಶ್ರೀ ಕೆ.ಆರ್. ಗೋವಿಂದರಾಜ ಶೆಟ್ಟಿ ಅಂಡ್ ಸನ್ಸ್ ಮಾಲೀಕರು ಶ್ರೀ ಕೆ.ಜಿ. ರಾಜೇಶ್ ಇವರಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗು 2004 ರ ನಿಯಮ 12 ರನ್ವಯ ಮಾರಾಟ ಮಾಡುವ ಸಂಬಂಧ ಈ ಕುರಿತಂತೆ ಸಕ್ಷಮ ಪ್ರಾಧಿಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ದೊರೆತ ನಂತರ ಅರ್ಜಿದಾರರಿಂದ ನಿಗದಿತ ವರ್ಗಾವಣೆ ಶುಲ್ಕ ಪಾವತಿಸಿಕೊಂಡು ಅರಸೀಕೆರೆ ಮುಖ್ಯ ಮಾರುಕಟ್ಟೆ ಪ್ರಾಂಗಣದ ನಿವೇಶನ ಸಂಖ್ಯೆ 120(ಎ) ಮತ್ತು ಅದರಲ್ಲಿನ ಕಟ್ಟಡವನ್ನು ಶ್ರೀ ಇಂದರ್‌ಚಂದ್ ಬಿನ್ ದಿವಂಗತ ಕೇಸರಿಮಲ್ ಇವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡು ಶ್ರೀ ಕೆ.ಆರ್. ಗೋವಿಂದರಾಜಶೆಟ್ಟಿ & ಸನ್ಸ್, ಮಾಲೀಕರು ಶ್ರೀ ಕೆ.ಜಿ. ರಾಜೇಶ್ ಇವರಿಗೆ ಮಾರಾಟ ಮಾಡಲು ಕಾರ್ಯೋನ್ಮುಖವಾಗತಕ್ಕದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ವಿಷಯ 8): ***ಕೃಉಮಾಸ, ಅರಸೀಕೆರೆ – ಸಮಿತಿಯ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್–ಕಂ–ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲಾದ ಗೋದಾಮು ಸಂಖ್ಯೆ –3 (ಎನ್.ಜಿ.ಆರ್.ಜಿ. ಗೋದಾಮು) ರಲ್ಲಿ ಮೆ॥ ಆಂಜನೇಯ ಟ್ರೇಡರ್ಸ್, ಜಾವಗಲ್ ನಾಮೆಯಲ್ಲಿ ವ್ಯವಹರಿಸುತ್ತಿದ್ದ ಶ್ರೀ ಎ.ಜಿ. ತಿಮ್ಮಪ್ಪ ಇವರು ನಿಧನ ಹೊಂದಿದ ಪ್ರಯುಕ್ತ ಅದೇ ನಾಮೆಯಲ್ಲಿ ವರ್ತಕರ ಲೈಸೆನ್ಸ್ ಪಡೆದು ವ್ಯವಹರಿಸುತ್ತಿರುವ ಅವರ ಮಗ ಶ್ರೀ ಜಿ.ಟಿ. ಹರೀಶ್ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಲು ಕೋರಿ ಬಂದ ಮನವಿ ದಿನಾಂಕ 25/07/2018 ನ್ನು ವಿವರವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಕೃಉಮಾಸ, ಅರಸೀಕೆರೆ – ಸಮಿತಿಯ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಲೀಸ್–ಕಂ–ಸೇಲ್ ಆಧಾರದಲ್ಲಿ ಮಾನ್ಯ ನಿರ್ದೇಶಕರು, ಕೃಮಾಇ, ಬೆಂಗಳೂರು ಇವರ ಆದೇಶ ಪತ್ರ ಸಂಖ್ಯೆ ಕೃಮಾಈ/260/ಅಭಿಕೆ–2/05 ದಿನಾಂಕ 23/12/2009 ರನ್ವಯ ಹಂಚಿಕೆ ಮಾಡಲಾದ ಗೋದಾಮು ಸಂಖ್ಯೆ – 3 (ಎನ್.ಜಿ.ಆರ್.ಜಿ ಗೋದಾಮು) ರಲ್ಲಿ ಮೆ॥ ಆಂಜನೇಯ ಟ್ರೇಡರ್ಸ್ ನಾಮೆಯಲ್ಲಿ ವ್ಯವಹರಿಸುತ್ತಿದ್ದ ಶ್ರೀ ಎ.ಜಿ. ತಿಮ್ಮಪ್ಪ ರವರು ದಿನಾಂಕ 28/01/2018 ರಂದು ನಿಧನ ಹೊಂದಿದ ಪ್ರಯುಕ್ತ ಅವರ ಹಿರಿಯ ಮಗನಾದ ಶ್ರೀ ಜೆ.ಟಿ. ಹರೀಶ್ ಬಿನ್ ಲೇಟ್ ಎ.ಜಿ. ತಿಮ್ಮಪ್ಪ ಇವರ ಹೆಸರಿಗೆ ಅವರ ತಂದೆಯವರು ನಿಧನರಾದ 2018 ನೇ ಸಾಲಿನಿಂದಲೇ ಲೈಸೆನ್ಸ್ ಪಡೆದು ವ್ಯಾಪಾರ ವಹಿವಾಟು ನಡೆಸಿಕೊಂಡು ಬರುತ್ತಿದ್ದು ಅವರ ಮಗನಾಗಿರುವ ಎ.ಟಿ. ಹರೀಶ್ ರವರು ತಮ್ಮ ತಂದೆಯ ಹೆಸರಿಗೆ ಲೀಸ್–ಕಂ–ಸೇಲ್ ಆಗಿರುವ ಗೋದಾಮು ಸಂಖ್ಯೆ 3 (ಎನ್.ಜಿ.ಆರ್.ಜಿ. ಗೋದಾಮು) ನ್ನು ಖಾತೆ ವರ್ಗಾವಣೆ ಮಾಡಿಕೊಳ್ಳುವ ಸಂಬಂಧ ದಿನಾಂಕ 25/07/2018 ರಂದು ಅಧಿಕೃತ ವರ್ತಕರ ಪರವಾನಿಗೆ ಪತ್ರ, ಜಿ.ಎಸ್.ಟಿ. ಪ್ರಮಾಣ ಪತ್ರ ಮತ್ತು ವಂಶವೃಕ್ಷ ದಾಖಲಾತಿಗಳನ್ನು ಸಮಿತಿಗೆ ಸಲ್ಲಿಸಿ ದಿವಂಗತ ಎ.ಜಿ. ತಿಮ್ಮಪ್ಪ ರವರ ಮಗನಾದ ಜೆ.ಟಿ. ಹರೀಶ್ ರವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡುವ ಕುರಿತಂತೆ ಕೋರಿರುವುದನ್ನು ಸಮಿತಿಯು ವಿವರವಾಗಿ ಪರಿಶೀಲಿಸಿ ಸಮಿತಿಯು ಇದಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು. ಈ ಕುರಿತಂತೆ ಸಕ್ಷಮ ಪ್ರಾಧಿಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ ಮಂಜೂರಾತಿ ದೊರೆತ ನಂತರ ಅರ್ಜಿದಾರರಿಂದ ನಿಗದಿತ ವರ್ಗಾವಣೆ ಶುಲ್ಕವನ್ನು ಪಾವತಿಸಿಕೊಂಡು ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದ ಗೋದಾಮು ಸಂಖ್ಯೆ 3 (ಎನ್.ಜಿ.ಆರ್.ಜಿ. ಗೋದಾಮು) ನ್ನು ಶ್ರೀ ಜೆ.ಟಿ. ಹರೀಶ್ ಬಿನ್ ಲೇಟ್ ಎ.ಜಿ. ತಿಮ್ಮಪ್ಪ ಇವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡಲು ಕಾರ್ಯೋನ್ಮುಖವಾಗಬೇಕೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 9): ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೇ ವಿಷಯಗಳು.***

***ವಿಷಯ 9(1): ಮಾನ್ಯ ನಿರ್ದೇಶಕರು, ಕೃಮಾಇ, ಬೆಂಗಳೂರು ಇವರ ಮಂಜೂರಾತಿ ಪತ್ರ ಸಂಖ್ಯೆ ಕೃಮಾಇ/ಮಾಅಯೋ/ಅಅ/312/2018–19 ದಿನಾಂಕ 18/03/2019 ಮತ್ತು ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಮೈಸೂರು ವಿಭಾಗ, ಮೈಸೂರು ಇವರ ಪತ್ರ ದಿನಾಂಕ 29/05/2019ರ ಸೂಚನೆಯನುಸಾರ ಅರಸೀಕೆರೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮುಖ್ಯ ರಸ್ತೆ 1 ಮತ್ತು 2 ಹಾಗೂ 3 ಮತ್ತು 4 ರ ಮಧ್ಯೆ ಇರುವ ಮುಚ್ಚಿದ ಹರಾಜುಕಟ್ಟೆಗಳೀಗೆ ಅಳವಡಿಸಲಾದ ಹಳೆಯ ಜಿ.ಐ. ಶೀಟ್‌ಗಳ ಅಳತೆ 8884.72 ಚದರ ಮೀಟರ್ ಮತ್ತು ತೂಕ 91,423.77 ಕೆ.ಜಿ. ಜಿ.ಐ. ಶೀಟ್‌ಗಳನ್ನು ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ವಿಲೇ ಮಾಡುವ ಸಂಬಂಧ ಸಮಿತಿಯ ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆ (2ನೇ ಕರೆ) ಸಂಖ್ಯೆ ಕೃಉಮಾಸ(ಅರಸೀ)/1846/2019–20 ದಿನಾಂಕ 06/02/2020 ರನ್ವಯ ದಿನಾಂಕ 09/03/2020 ರಂದು ನಡೆದ ಟೆಂಡರ್–ಕಂ–ಬಹಿರಂಗ ಹರಾಜು ಪ್ರಕ್ರಿಯೆಯನ್ನು ವಿವರವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ಸಮಿತಿಯು ಈ ಬಗ್ಗೆ ವಿವರವಾಗಿ ಪರಿಶೀಲಿಸಿತು. ಮಾನ್ಯ ನಿರ್ದೇಶಕರು, ಕೃಮಾಇ, ಬೆಂಗಳೂರು ಇವರ ಮಂಜೂರಾತಿ ಪತ್ರ ಸಂಖ್ಯೆ ಕೃಮಾಇ/ಮಾಅಯೋ/ಅಅ/312/2018–19 ದಿನಾಂಕ 18/03/2019 ಮತ್ತು ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಮೈಸೂರು ವಿಭಾಗ, ಮೈಸೂರು ಇವರ ಪತ್ರ ದಿನಾಂಕ 29/05/2019ರ ಸೂಚನೆಯನುಸಾರ ಅರಸೀಕೆರೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮುಖ್ಯ ರಸ್ತೆ 1 ಮತ್ತು 2 ಹಾಗೂ 3 ಮತ್ತು 4 ರ ಮಧ್ಯೆ ಇರುವ ಮುಚ್ಚಿದ ಹರಾಜುಕಟ್ಟೆಗಳಿಗೆ ಅಳವಡಿಸಲಾದ ಹಳೆಯ ಜಿ.ಐ. ಶೀಟ್‌ಗಳ ಅಳತೆ 8884.72 ಚದರ ಮೀಟರ್ ಮತ್ತು ತೂಕ 91,423.77 ಕೆ.ಜಿ. ಜಿ.ಐ. ಶೀಟ್‌ಗಳನ್ನು ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಅರಸೀಕೆರೆ ರವರು ನಿಗದಿಪಡಿಸಿರುವ ದರವನ್ನು ಮೂಲ ದರವನ್ನಾಗಿ ಪರಿಗಣಿಸಿ ವಿಲೇವಾರಿ ಮಾಡಲು ಮಂಜೂರಾತಿ ನೀಡಿರುವ ಹಿನ್ನಲೆಯಲ್ಲಿ ಈ

ಸಮಿತಿ ಪ್ರಕಟಣೆ ಸಂಖ್ಯೆ ಕೃಉಮಾಸ(ಅರಸೀ)/1846/2019-20 ದಿನಾಂಕ 06/02/2020 ರ ಮುಖಾಂತರ ನಿಯಮಾನುಸಾರ ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಸಿಲಾಗಿದ್ದು ಅದರಂತೆ ದಿನಾಂಕ ದಿನಾಂಕ 09/03/2020 ರಂದು ಸಂಜೆ 3.00 ಗಂಟೆಗೆ ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನವಾಗಿದ್ದು ಹಾಗೂ ಅದೇ ದಿನ ಸಂಜೆ 4.00 ಗಂಟೆಗೆ ಬಹಿರಂಗ ಹರಾಜು ಸಮಯ ನಿಗದಿಪಡಿಸಲಾಗಿದ್ದು ಸದರಿ ಟೆಂಡರ್-ಕಂ-ಬಹಿರಂಗ ಹರಾಜಿನಲ್ಲಿ 19 ಜನ ಟೆಂಡರ್‌ದಾರರು ಭಾಗವಹಿಸಿದ್ದು ಅವುಗಳ ವಿವರ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಟೆಂಡರ್‌ದಾರರ ಹೆಸರು | ಇ.ಎಂ.ಡಿ. ಪಾವತಿಸಿದ ವಿವರ | ಟೆಂಡರ್‌ನಲ್ಲಿ ಸಲ್ಲಿಸಿದ ಮೊತ್ತ ರೂ. ಪೈ ಪ್ರತಿ ಕೆ.ಜಿ. ಗೆ | ಬಹಿರಂಗ ಹರಾಜು ವಿವರ ರೂ. ಪೈ ಪ್ರತಿ ಕೆ.ಜಿ. ಗೆ | ಷರಾ |
|---|---|---|---|---|---|
| 1 | ಸಿದ್ದಪ್ಪದೇವರು, ಸಂಪಿಗೆ ಗ್ರಾಮ, ತುರುವೇಕೆರೆ ತಾಲ್ಲೂಕು | ಡಿ.ಡಿ. ಸಂ. 606404 ರೂ. 25,000/- ದಿನಾಂಕ 28/02/2020 | - | - | - |
| 2 | ಪರಮೇಶಿ, ಬಿನ್ ಬಸವಣ್ಣಪ್ಪ, ಅರಸೀಕೆರೆ (ಎಲೆ ಅಡಿಕೆ ವ್ಯಾಪಾರಿ) | ಡಿ.ಡಿ. ಸಂ. 606405 ರೂ. 25,000/- ದಿನಾಂಕ 28/02/2020 | 5.00 | - | - |
| 3 | ಸಯದ್ ನಯಿಮ್ ಬಿನ್ ಸಯದ್ ಹಯಾತ್ ಸಾಬ್, ಗಂಡಸಿ | ರೂ. 25,000/- ರಸೀದಿ ಸಂ. 38003 ದಿನಾಂಕ 09/03/2020 | 6.25 | 6.75 | - |
| 4 | ತನ್ವೀರ್ ಖಾನ್ ಬಿನ್ ಮಹಮ್ಮದ್ ಖಾನ್ ಎಂ.ಕೆ.ಎಸ್. ಸ್ಕ್ರಾಪ್ ಮರ್ಚೆಂಟ್, ಅರಸೀಕೆರೆ | ರೂ. 25,000/- ರಸೀದಿ ಸಂಖ್ಯೆ 37989 ದಿನಾಂಕ 09/03/2020 | - | **6.70, 6.85, 6.95, 7.15, 7.35, 7.55, 7.70** | **3ನೇ ಹೆಚ್ಚು ದರ** |
| 5 | ಲೋಹಿತ್ ಬಿನ್ ರಾಜಣ್ಣ, ಸಂಪಿಗೆ ಗ್ರಾಮ ತುರುವೇಕೆರೆ ತಾಲ್ಲೂಕು | ರೂ. 25,000/- ರಸೀದಿ ಸಂಖ್ಯೆ 37974 ದಿನಾಂಕ 09.03.2020 | **5.30** | **6.72, 6.83** | - |
| 6 | ವಿರೂಪಾಕ್ಷ ಬಿನ್ ನಂಜುಂಡಪ್ಪ ಹರಳಗುಪ್ಪ, ತಿಪಟೂರು ತಾಲ್ಲೂಕು | ರೂ. 25,000/- ರಸೀದಿ ಸಂಖ್ಯೆ 37976 ದಿನಾಂಕ 09.03.2020 | - | **6.91, 6.93** | - |
| 7 | ಈಶ್ವರ್ ಬಿನ್ ರಾಜಣ್ಣ, ಅಗ್ಗುಂದ, ಅರಸೀಕೆರೆ | ರೂ. 25,000/- ರಸೀದಿ ಸಂಖ್ಯೆ 37978 ದಿನಾಂಕ 09.03.2020 | **5.50** | **6.55, 6.80** | - |
| 8 | ಎಸ್.ಕೆ. ಟ್ರೇಡರ್ಸ್, ಪ್ರೋ॥ ಮಹಮದ್ ಖಲೀಮ್, ಬಿನ್ ಮೊಹಮ್ಮದ್ ಸಾದಿಕ್, ಶಿವಮೊಗ್ಗ | ಡಿ.ಡಿ. ಸಂ. 177280 ರೂ. 25,000/- ದಿನಾಂಕ 07/03/2020 | **6.25** | **7.00, 7.10, 7.30, 7.50, 7.65, 7.75** | **2 ನೇ ಹೆಚ್ಚು ದರ** |
| 9 | ಮಂಜುಳಾದೇವಿ ಕೋಂ. ಎಂ. ಬಸವರಾಜಯ್ಯ, ಹಿರಿಯೂರು | ರೂ. 25,000/- ರಸೀದಿ ಸಂಖ್ಯೆ 37981 ದಿನಾಂಕ 09/03/2020 | **6.00** | **6.58, 6.71** | - |
| 10 | ನೂರ್ ಅಹಮದ್ ಬಿನ್ ಮಹಮದ್ ಹನೀಫ್ ಸಾಬ್, ದಾವಣಗೆರೆ | ರೂ. 25,000/- ರಸೀದಿ ಸಂಖ್ಯೆ 37983 ದಿನಾಂಕ 09/03/2020 | - | **6.98, 7.03** | - |
| 11 | ಎಂ.ಎಸ್.ಪಿ.ಸಿ. ಅಂಡ್ ಎಸ್.ಎನ್.ಪಿ. ಗ್ರೂಪ್ಸ್, ನೊಣವಿನಕೆರೆ | ರೂ. 25,000/- ರಸೀದಿ ಸಂಖ್ಯೆ 37985 ದಿನಾಂಕ 09/03/2020 | **6.50** | **6.60, 6.90, 7.05, 7.20, 7.40, 7.60, 7.80** | **1ನೇ ಹೆಚ್ಚು ದರ** |
| 12 | ನಿಜಗುಣ ಬಿನ್ ವೀರಸಂಗಪ್ಪ, ನೊಣವಿನಕೆರೆ | ರೂ. 25,000/- ರಸೀದಿ ಸಂಖ್ಯೆ 37987 ದಿನಾಂಕ 09/03/2020 | **5.10** | **6.50, 6.62** | - |
| 13 | ಮಹಮದ್ ಬಿಲಾಲ್ ಬಿನ್ ಆರಿಫ್ ಖಾನ್, ಅರಸೀಕೆರೆ | ರೂ. 25,000/- ರಸೀದಿ ಸಂಖ್ಯೆ 37990 ದಿನಾಂಕ 09/03/2020 | - | **7.08, 7.12** | - |
| 14 | ಟಿ.ಎ. ಎಂಟರ್‌ಪ್ರೈಸಸ್, ಬೆಂಗಳೂರು | ರೂ. 25,000/- ರಸೀದಿ ಸಂಖ್ಯೆ 37992 ದಿನಾಂಕ 09/03/2020 | **6.00** | **7.16, 7.18** | - |

| | | | | | |
|---|---|---|---|---|---|
| 15 | **Arfa Traders,** ಬೆಂಗಳೂರು | ರೂ. 25,000/- ರಸೀದಿ ಸಂಖ್ಯೆ 37994 ದಿನಾಂಕ 09/03/2020 | - | **6.78, 7.21** | - |
| 16 | ಎಂ.ಕೆ. ಮದೀನ್ ಟ್ರೇಡರ್ಸ್ ಬೆಂಗಳೂರು | ರೂ. 25,000/- ರಸೀದಿ ಸಂಖ್ಯೆ 37996 ದಿನಾಂಕ 09/03/2020 | 6.00 | 7.24, 7.26 | - |
| 17 | ನೂರ್ ಅಹಮದ್, ಬೆಂಗಳೂರು | ರೂ. 25,000/- ರಸೀದಿ ಸಂಖ್ಯೆ 37998 ದಿನಾಂಕ 09/03/2020 | 6.00 | 6.88, 7.31 | - |
| 18 | ಮಹಮದ್ ಫೀರ್, ಬೆಂಗಳೂರು | ರೂ. 25,000/- ರಸೀದಿ ಸಂಖ್ಯೆ 38000 ದಿನಾಂಕ 09/03/2020 | - | 7.33, 7.36 | - |
| 19 | ಫೈರೋಜ್ ಖಾನ್, ದಾವಣಗೆರೆ | ರೂ. 25,000/- ರಸೀದಿ ಸಂಖ್ಯೆ 38002 ದಿನಾಂಕ 09/03/2020 | 6.25 | 7.41, 7.45 | - |

ಈ ಮೇಲ್ಕಂಡಂತೆ ನಮೂದಿಸಿರುವ 19 ಜನ ಟೆಂಡರ್‌ದಾರರಲ್ಲಿ ಟೆಂಡರ್-ಕಂ-ಬಹಿರಂಗ ಹರಾಜಿನಲ್ಲಿ ಸಲ್ಲಿಸಿದ ಟೆಂಡರ್ ದರಗಳನ್ನು ಪರಿಶೀಲಿಸಲಾಗಿ ಕ್ರ.ಸಂ. 11 ರಲ್ಲಿನ ಟೆಂಡರ್‌ದಾರರಾದ ಎಂ.ಎಸ್.ಪಿ.ಸಿ. & ಎಸ್.ಎನ್.ಪಿ. ಗ್ರೂಪ್ಸ್, ನೊಣವಿನಕೆರೆ ಇವರು ಬಹಿರಂಗ ಹರಾಜಿನಲ್ಲಿ ಕೆ.ಜಿ. ಒಂದಕ್ಕೆ ರೂ. 7.80 ರಂತೆ ಕೂಗಿದ ಬಿಡ್‌ದಾರರಾಗಿದ್ದು 1ನೇ ಹೆಚ್ಚು ದರ ನೀಡಿರುತ್ತಾರೆ. ಅಲ್ಲದೇ ಟೆಂಡರ್ ಷರತ್ತು-ವ-ನಿಬಂಧನೆಗಳಂತೆ ಯಶಸ್ವಿ ಬಿಡ್‌ದಾರರಾಗಿರುತ್ತಾರೆ. ಮಾನ್ಯ ನಿರ್ದೇಶಕರು ನೀಡಿದ ಮಂಜೂರಾತಿಯನ್ವಯ ಸದರಿ ಹಳೆ ಶೀಟ್‌ಗಳ ಮೂಲ ದರ ಕೆ.ಜಿ. ಒಂದಕ್ಕೆ ರೂ. 6.50 ಇದ್ದು ಇದರ ಒಟ್ಟು ಮೊತ್ತ ರೂ. 5,94,254=00 ಗಳಾಗುತ್ತದೆ. ಪ್ರಸ್ತುತ ಬಹಿರಂಗ ಹರಾಜಿನಲ್ಲಿ ಕೆ.ಜಿ. ಒಂದಕ್ಕೆ ರೂ. 7.80 ಬಂದಿರುವುದರಿಂದ ಇದರ ಒಟ್ಟು ಮೊತ್ತ ರೂ. 7,13,105=00 ಗಳಾಗುತ್ತಿದ್ದು ಮೂಲ ದರಕ್ಕಿಂತ ರೂ. 1,18,851=00 ಹೆಚ್ಚು ಬಂದಿರುತ್ತದೆ. ಈ ಹಿನ್ನಲೆಯಲ್ಲಿ ಸಮಿತಿಯು ಈ ದರವನ್ನು ವಿವರವಾಗಿ ಪರಿಶೀಲಿಸಿ ಇದಕ್ಕೆ ಸರ್ವಾನುಮತದಿಂದ ತನ್ನ ಒಪ್ಪಿಗೆಯನ್ನು ನೀಡಿತು. ಸದರಿ ಯಶಸ್ವಿ ಬಿಡ್ಡುದಾರರಿಂದ ತಾಂತ್ರಿಕ ವಿಭಾಗದವರು ಪರಿಗಣಿಸಿರುವ ಸಮಿತಿಯ ದಾಸ್ತಾನಿನಲ್ಲಿರುವ ಒಟ್ಟು 91423.77 ಕೆ.ಜಿ. ಗೆ ದರ ರೂ. 7.80 ರಂತೆ ತಗಲುವ 91423.77 ಕೆ.ಜಿ. X ರೂ. 7.80 ಒಟ್ಟು ರೂ. 7,13,105=40 ಇದಕ್ಕೆ ಶೇ. 18 ಜಿ.ಎಸ್.ಟಿ. ರೂ. 1,28,358=97 ಹೀಗೆ ಒಟ್ಟು ರೂ. 8,41,464=37 ನ್ನು ನಿಯಮಾನುಸಾರ ಪೂರ್ಣವಾಗಿ ಪಾವತಿಸಿಕೊಂಡು 1ನೇ ಯಶಸ್ವಿ ಬಿಡ್ಡುದಾರರಾದ ಮೆ॥ ಎಂ.ಎಸ್.ಪಿ.ಸಿ. & ಎಸ್.ಎನ್.ಪಿ. ಗ್ರೂಪ್ಸ್, ನೊಣವಿನಕೆರೆ ಇವರಿಗೆ ವಿಲೇವಾರಿ ಮಾಡತಕ್ಕದ್ದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ಸಹಿ/-
(ಸಿದ್ದರಾಜು)
ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.

ಸಹಿ/-
(ಜಯರಾಮ)
ಅಧ್ಯಕ್ಷರು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.

:ನಕಲು:

ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.